ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಅನುಮತಿ ಪಡೆದ ಖಾಸಗಿ ಪ್ರೌಢಶಾಲೆಗಳು.

18(13)

ಶ್ರೀ ವಸಂತ ಎ. ಸಾಲಿಯಾನ (ಕಾಪು):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ 1990ಕ್ಕಿಂತ ಮೊದಲು ಜಿಲ್ಲಾ ಪರಿಷತ್ತಿನಿಂದ ಅನುಮತಿ ಪಡೆದು ಪ್ರಾರಂಭಿಸಲಾಗಿರುವ ಖಾಸಗಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಇಂತಹ ಖಾಸಗಿ ಪ್ರೌಢಶಾಲೆಗಳಿವೆ;

ಇ) ಗ್ರಾಮಾಂತರ ಪ್ರದೇಶಗಳಲ್ಲಿರುವ ವಿದ್ಯಾಸಂಸ್ಥೆಗಳಿಗೆ ಸರ್ಕಾರದವರು ಅನುಮತಿ ನೀಡಿದ್ದರೂ ಇದುವರೆವಿಗೂ ಅನುದಾನ ಮಂಜೂರಾತಿ ಮಾಡದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಅನುದಾನ ಮಂಜೂರು ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 210

ಆ) 11

ಇ) ದಿನಾಂಕ 1-6-87ರ ನಂತರ ಮಂಜೂರಾದ ಶಾಲೆಗಳು ಶಾಶ್ವತ ಅನುದಾನ ರಹಿತ ಶಾಲೆಗಳಾಗಿರುವುದರಿಂದ ಅನುದಾನ ನೀಡುವ ಪ್ರಶ್ನೆ.

ಈ) ಉದ್ಭವಿಸುವುದಿಲ್ಲ.

ವಿಷಯ:- ನಾಗರಹೊಳೆ ಪ್ರದೇಶದಲ್ಲಿ ಅರಣ್ಯ ಸಂಪತ್ತು ಮತ್ತು ವನ್ಯಮೃಗಗಳ ರಕ್ಷಣೆ.

19(84)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ನಾಗರಹೊಳೆ ಪ್ರದೇಶದಲ್ಲಿ ಅರಣ್ಯ ಸಂಪತ್ತು ಮತ್ತು ವನ್ಯ ಮೃಗಗಳ ರಕ್ಷಣೆಗೆ ಅರಣ್ಯ ಇಲಾಖೆಯವರು ಕೈಗೊಂಡಿರುವ ಕ್ರಮಗಳೇನು;

ಆ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಅರಣ್ಯ ಪ್ರದೇಶ ಇದೆ ಎಲ್ಲಿ ಎಲ್ಲಿ;

ಇ) ಈ ಅರಣ್ಯ ಸಂಪತ್ತನ್ನು ರಕ್ಷಿಸಲು ಕೈಗೊಂಡಿರುವ ಆಧುನಿಕ ಕ್ರಮಗಳೇನು?